ವಿಷಯ: ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಕುರಿತು.

1303 (1756)ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಒಟ್ಟು ಎಷ್ಟು ಹುದ್ದೇಗಳಿಗೆ ನೇಮಕ ಮಾಡಲಾಗಿದೆ. ಅವು ಯಾವುವು ಯಾವ ಯಾವ ಹುದ್ದೆಗೆ ಯಾರು ಯಾರನ್ನು ನೇಮಕ ಮಾಡಲಾಗಿದೆ?

ಆ) ನೇಮಕಾತಿಗೆ ಸಂಬಂಧಿಸಿದಂತೆ ಸಾರ್ವಜನಿಕ ಜಾಹಿರಾತು ಎಂದು ನೀಡಲಾಯಿತು? ಯಾವ ಮಾಧ್ಯಮದ ಮುಖಾಂತರ ಜಾಹಿರಾತು ನೀಡಲಾಗಿದೆ?

ಇ) ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ?

ಈ) ನೇಮಕಾತಿ ಸಮಿತಿ ರಚಿಸಲಾಗಿದೆಯೇ? ಅದರ ಸದಸ್ಯರುಗಳು ಯಾರು ಯಾರು ಯಾವಾಗ ನೇಮಕವಾಯಿತು? ಈಗ ನೇಮಕಗೊಂಡವರು ಈ ನೇಮಕಾತಿಯ ಅಡಿಯಲ್ಲಿ ಬಂದಿದ್ದಾರೆಯೇ?

ಡಾ. ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅಧಿನಿಯಮ 1994ರ ಪ್ರಕಾರ ಅಧಿನಿಯಮದಲ್ಲಿ ಸೂಚಿಸಿರುವ ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳ ಹುದ್ದೆಗಳಿಗೆ ನಿಯೋಜನೆಯ ಮೇಲೆ ಪ್ರೊ.ಕೆ.ಎನ್.ವೆಂಕಟಕೃಷ್ಣರಾವ್ (ಕುವೆಂಪು ವಿಶ್ವವಿದ್ಯಾನಿಲಯದಿಂದ ವಿನಿಯೋಜನೆ) ಡಾ. ಆರ್.ಕೆ. ರಾಜು (ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ನಿಯೋಜನೆ, ಶ್ರೀ ಆರ್.ಕೆ. ಪ್ರಸಾದ್ (ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ), ಅವರುಗಳನ್ನು ಕುಲಪತಿಗಳು ಸೆಕ್ಷನ್ 60(4)ರ ಪ್ರಕಾರ ನೇಮಕ ಮಾಡಿದ್ದಾರೆ. ವಿಶ್ವವಿದ್ಯಾಲಯದ ನಿರ್ವಹಣೆಗೆ ತೀರಾ ಅಗತ್ಯವಾದ ಕೆಲವು ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಹಂಗಾಮಿಯಾಗಿ ಸಂಚಿತ ವೇತನದ ಮೇಲೆ ಸೆಕ್ಷನ್ 60(4)ರ ಪ್ರಕಾರ ಕುಲಪತಿಗಳು ನೇಮಿಸಿದ್ದು, ಈ ತಾತ್ಕಾಲಿಕ ಹುದ್ದೆಗಳ ನೇಮಕಾತಿಗಳು ತೀರಾ ತಾತ್ಕಾಲಿಕವಾಗಿದ್ದು, ಪ್ರಾಧಿಕಾರಿಗಳು ಮತ್ತು ನೇಮಕಾತಿ ಮಂಡಳಿಗಳು ರಚನೆಯಾದ ಮೇಲೆ ನಿಯಮಾನುಸಾರ ಭರ್ತಿಯಾಗುವವರೆಗೆ ಮಾತ್ರ ಚಾಲ್ತಿಯಲ್ಲಿರುತ್ತವೆ.

ಆ) ತೀರಾ ತಾತ್ಕಾಲಿಕ ವ್ಯವಸ್ಥೆಯಾದ್ದರಿಂದ ಜಾಹಿರಾತನ್ನು ನೀಡಿರುವುದಿಲ್ಲ.

ಇ) ಈ ಹುದ್ದೆಗಳಲ್ಲಿ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಆದ್ಯತೆ ನೀಡಲಾಗಿದೆ.

ಈ) ನೇಮಕಾತಿ ಮಂಡಳಿಯನ್ನು ವಿಶ್ವವಿದ್ಯಾನಿಲಯದ ಅಧಿನಿಯಮದ ಪ್ರಕಾರ ಮಾಡಬೇಕಾಗಿದ್ದು, ನೇಮಕಾತಿ ಮಂಡಳಿ ಇನ್ನೂ ರಚನೆಯಾಗಿರುವುದಿಲ್ಲ.

ವಿಷಯ : ರಾಜ್ಯದಲ್ಲಿರುವ 'ಬಿ' ಫಾರ್ಮಸಿ ಕಾಲೇಜುಗಳಲ್ಲಿ ಸರ್ಕಾರದ ಆದೇಶ ಮೀರಿ ಪ್ರವೇಶ ನೀಡಿರುವುದು.

1306 (1832)-ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ 'ಬಿ' ಫಾರ್ಮಸಿ ಕಾಲೇಜುಗಳ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)

ಆ) 1997-98ನೇ ವರ್ಷದ ಸೀಟುಗಳ ಹಂಚಿಕೆ ಮಾಡಲಾಗಿದೆಯೇ?

ಇ) ಕಾಲೇಜುಗಳ ಆಡಳಿತ ಮಂಡಳಿಯವರು ಸರ್ಕಾರದ ಆದೇಶ ಮೀರಿ ಸೀಟುಗಳನ್ನು ಭರ್ತಿಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೋ ? ಬಂದಿದ್ದರೆ ವಿವರ ಒದಗಿಸುವುದು.

ಈ) ಈ ಬಗ್ಗೆ ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಡಾ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು.)

ಅ) 47. (ವಿವರಗಳ ಪಟ್ಟಿಯನ್ನು ಲಗತ್ತಿಸಿದೆ)

ಆ) ಇಲ್ಲ.

ಇ) ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.